
# ಗೆಳೆಯನೊಬ್ಬ ಊರು ಬಿಟ್ಟು ಹೊರಟಾಗ...



ಸೃಜನ್

**ಆ** ಮಿನಾರುಗಳ ನಗರಕ್ಕೆ
ನೀನು ವಿದಾಯ ಹೇಳಿ ಹೊರಟಾಗ
ಮಾತನಾಡಿಸಲು ನಾನು ಬರಲಿಲ್ಲ ಗೆಳೆಯಾ

ಹೆಂಡತಿ ಮಕ್ಕಳೊಂದಿಗೆ
ಸಾಮಾನು ಸರಂಜಾಮುಗಳೊಂದಿಗೆ
ನೀನು ಗಾಡಿ ಏರಿ ಕುಂತಾಗ

ಆ ಶಾಪಗ್ರಸ್ತ ಬಿಸಿಲೂರಿನ
ಹಾಳುಕೋಟೆಯ ದೂಳುತುಂಬಿದ ಬೀದಿಗಳಲ್ಲಿ
ಕ್ಷಿಪ್ರ ಕ್ರಾಂತಿಗೆ ಸಿಂಹಾಸನ ಕಳೆದುಕೊಂಡ
ಅರಸನಂತೆ ನಾನು ಅಸಮಾಧಾನಿಯಾಗಿದ್ದೆ
ಬರಿಗಾಲಲಿ ತಿರುಗಿದ್ದೆ

ಮಾರ್ಚ್ ತಿಂಗಳಿನ ಮಟಮಟ ಮಧ್ಯಾಹ್ನ
ಆ ಭಟ್ಟಿ ಸಾರಾಯಿಯಂತಹ
ಬಿಡುಗಡೆಯ ಬಿಸಿಲು ಗೆಳೆಯರಿಬ್ಬರ
ಆಡಂಬರ, ನಗೆಚಾಟಿಕೆ, ಚಿಲ್ಲರೆತನ,
ಆಟ–ಪರದಾಟಗಳೆಲ್ಲವನು ಮೀರಿ
ಈಗ ತಾನೆ ತತ್ತಿಯಿಟ್ಟ
ತಾಯಿಕೋಳಿಯಂತೆ ನಮ್ಮನು
ಮರಿಮಾಡಲು ಕಾವಿಗೆ ಕುಂತಿತ್ತು...

ಆ ಮಿನಾರುಗಳ ಊರಿನಲಿ
ನೀನು ವಿದಾಯ ಹೇಳಿ ಹೊರಟಾಗ
ಮಾತನಾಡಿಸಲು ನಾನು ಬರಲಿಲ್ಲ ಗೆಳೆಯಾ

ಕೋಟೆಗಲ್ಲಿನ ಮೇಲೆ ಕೊರೆದ
ಕ್ರಾಂತಿಯ ಮಂತ್ರ
ಊರ ಮಂದಿಯ ಉಚ್ಚೆ ದಾಳಿಗೊಳಗಾಗಿ

...ಕವಿತೆಯಂತಹ ಬಿಸಿಲು ಬಿಟ್ಟರೆ
ಈಗ ನಾನೂ ಅಲ್ಲಿಲ್ಲ
ನೀನೂ ಕೂಡ!

● **ಆರಿಫ್ ರಾಜಾ**